**NORTH EAST KARNATAKA ROAD TRANSPORT CORPORATION**

CENTRAL OFFICES SARIGE SADANA, MAIN ROAD

(LABOUR DEPARTMENT)

## : Pay Scale Revision, Allowances and ,other Labour Welfare Schemes:

1) **Pay Scale Revision**: The pay Scale is being revised once in every 4 years.

2) Cash award scheme to the children of the officers/employees securing Highest marks in academic courses

| Sl.No | Educational Qualification | Percentage of Marks Secured | Medium of Instruction | |
|---|---|---|---|---|
| | | | Kannada | English |
| 1 | S.S.L.C | 80 to 90 | 2500/- | 2000/- |
| 2 | S.S.L.C | Above 90 | 3000/- | 2500/- |
| 3 | P.U.C. | 80 to 90 | 3000/- | 2500/- |
| 4 | P.U.C. | Above 90 | 3500/- | 3000/- |
| 5 | Degree: B.A/B.Com/ B.Sc./ M.B.B.S/ B.E/ B.B.M. | Above 60 | 4000/- | 3500/- |

**3) Financial Assistance to persue Professional Education**

The children of the officers/employees persuing professional education viz. M.B.B.S., B.U.M.S., B.D.S., B.A.M.S., M.D., B.E., M.B.A, M.C.A., M.Tech are given loan facility upto a maximum of Rs. 1,00,000/- @ 9.5% interest and for those persuing studies viz. Engineering, Diploma Courses are given loan facility upto a maximum of Rs. 30,000/- @ 9.5% interest. This loan amount is recoverable in 36 equal monthly instalments.

**4) Educational Assistance Scheme** :

Educational Assistance Fund is constituted for the educational assistance of the children of the employees. An amount of Rs. 10/- is recovered from the salary of each of the employee and an equal amount is contributed by the Corporation towards this fund. The children of the employees studying in the below said courses are given scholarships out of this fund.

| Sl.No. | Course | Duration | Scholarship (per year) |
|---|---|---|---|
| 1 | ITI | 1-2 years | Rs. 2,000/- |
| 2 | Engineering/Diploma | 3 years | Rs. 2,500/- |
| 3 | BE/BVSC/BHSC/BSC(Agri) | 4 years | Rs. 4,000/- |
| 4 | Post Graduate courses | 2-3 years | Rs. 4,000/- |
| 5 | Degree in Medicine | - | Rs. 5,000/- |

5) **Medical Scheme** : This scheme is governed by the Corporation according to the Karnataka Governament Servents (Medical Attendance) Rules 1963, Karnataka State Road Transport Corporation Employees Medical Treatment Rules 1970 and Government Ordrs in force from time to time, medical expenses borne by the employees themselves and for their dependants at the hospitals recognized by the Corporation are reimbursed as per the Non NABH of CGHS 2014 rates.

6). **Medical Advance** : Medical advances are is granted for the treatment to those employees and their dependants who are suffering from serious diseases such as Heart, Kidney, Cancer, Spinal Cord and Brain related diceases, based on the recommendations/estimates received from the concerned Hospitals.

7) **Medical Advance for Personal Illness** : Medical advance of an amount of Rs. 20,000/- is granted to those employees and their dependants suffering from personal ill health/diseases (other than severe diseases) and take inpatient treatment in hospitals, including private hospitals.

**8).** Maximum amount of medical advance is given for the medical treatment of those employees who sustain injuries due to accidents while on duty.

**9)** The employees injured due to private (Not on duty) accidents are given medical advance of Rs. 20,000/- for the treatment at hospitals.

**10)** Services of the Part time Honorary Medical Practitioners are engaged at all depots and divisional head quarters of the Corpration.

**11)** **Recognition to the Private Hospitals** : As many as 159 private hospitals and 7 private diagnostic centres are in the state have been given recognition so as to enable the employees of the Corporation and their dependents to avail better medical treatment. Besides this, 15 private interstate hospitals at Andhra Pradesh and Maharastra have been recognised for the treatment of serious illness of the employees of the Corporation. The employees of the Corporation and their dependents will avail inpatient treatment in those hospitals and avail the reimbursement of the medical expenses as per the medical attendance rules in force.

Medical expenses as per the Government hospital rates are reimbursed to those employees of the Corporation and to their dependents, who avails treatment at the recognized interstate hospitals of Hyderabad (Andhra Pradesh), Solapur & Miraj (Maharashtra) for serious diseases such as Heart, Cancer, Kidney, Spinal Cord, Brain Tumour.

12) **De-addiction facility:** Such of the duly identified chronic alcoholic employees are being given de-addiction treatment at KSRTC hospital situated at Jayanagar, Bengaluru since 1998. The treatment charges upto a maximum of Rs. 8,000/- is borned by the Corporation. The duration of the treatment is 40 days and the leave held at the credit of the concerned employee is granted for the said period. An employee is given de-addition treatment only once at the expenses of the Corporation during his entire service.

13) **Change of Category:** The services of Such of the employees sustaining injuries due to accidents while on duty and rendered incapacitated to perform the duties of their original post are availed at an equivalent or lower post based on the medical certificates issued by the Government Medical Board.

14) **I.O.D.Facility :** The period of medical treatment undergone by the employees (including on job trainees) who sustain injuries due to accidents while on duty is treated as On Duty based on the medical certificate issued by the medical practioner.

15) The services of those employees who is suffering with a minimum of 40% of disability due to the diseases prescribed under the Persons with Disablities Act 1995 (Column 2) are protected by engaging them to light works based on the medical certificates issued by the medical boards constituted by the Government.

16) The employees who are permanently physically unfit to perform the duties of their post are given the facility of voluntary retirement from the services along with a maximum additional financial benefit of Rs. 6-00 lakhs.

17) **Employees Family Welfare Scheme (Internal Group Insurance Scheme):** The Employees Family Welfare Scheme (Internal Group Insurance Scheme) is came into force with effect from September 2011. For this scheme an amount of Rs. 100/- is recovered from the monthly salary of the member officer/employee and an amount of Rs. 50/- for each member is contributed per month by the Corporation. If any officer/employee of the Corporation who is a member of this scheme dies while in service, his nominee will be paid with Rs: 3 lakhs as compensation amount.

18) **House Building Advance :**

The Corporation has provided 4% of the interest as subsuidy amount for those employees/ Officers who gets loan amount from the nationalized banks/ financial institutions an amount upto Rs: 5 lakhs for the purpose of purchase/ construction of the house with a ceiling limit of Rs.1 lakh interest subsidy.

19) **Appointment of Dependants of the Deceased employees :**

Depending upon the availability of the post the dependants of the employees who died while in service are appointed based on their educational qualification and according to the cadre & recruitment regulations.

20) **Leave :**

The employees of the Corporation are eligible for the following types of leave :

1) Casual Leave : 15 days per year
2) Earned Leave : 01 day for every 11 working days
3) Medical leave : 20 days of half pay leave for each year of the completed service

21) **Leave Encashment (Earned Leave) :**

Employees are provided with the facility of availing cash amount equivalent to 15 days earned leave by surrendering 15 days of earned leave from their leave account in each of the financial year from 1st of April to 31st of March.

22) The cumulative earned leave account ceiling is raised to 300 days which is on par with the state government rules.

23) The female employees of the Corporation are provided with the facility of 180 days of Maternity leave which is on par with that of the state Government.

24) The blind and the disabled employees are paid conveyance allowance of 6% of their basic pay which is on par with that of the state Government.

25) A well furnished seperate crew rest rooms with wash room are provided at all depots to the male and female employees of the Corporation.

26) An amount of Rs. 5,000/- is paid out of the DRBF fund towards the funeral expenses of the deceased employee and an amount of Rs. 10,000/- is paid from corporation as exgratia to the family of the deceased.

27) Monthly educational allowance of Rs. 500/- each is paid to the blind or physically disabled children of the employees who are fully dependent on the parents. Also nursing allowance of Rs. 500/- is paid to disabled children of the employees.

**28)** The child nursing leave of 730 days is given to the employees who are having mentally retarded/disabled children.

**29)** As per the provisions of the Bonus Act of Central Government and its recent amendments, a maximum bonus amount of Rs 7000/- is paid to those of the employees drawing a monthly salary upto Rs. 21,000/-

**30)** Monthly child nursing allowance of Rs. 750/- is paid to the female employees of the Corporation, till the child attains the age of 2 years.

**31)** Medical expenses reimbursement facility is extended to the on job trainees (Limit to Employees) of the Corporation.

**32)** The employees are reimbursed with Rs. 1000/- towards the purchase of spectacles expenses incurred by them thrice in their entire service.

**33**) The employees are paid festival advance upto Rs. 5000/- which is recoverable from their monthly salary in 10 equal instalments.

**34)** The drivers who are involved in fatal accidents are paid with a legal assistance of Rs. 5000/- and those drivers who involved in major accidents are paid with a legal assistance of Rs. 2500/-

**35)** **<u>Free Milk :</u>** Free milk @ ¼ litre per day provided based on attendence to the spray painters, welders, tin smiths, electricians involved in the preparation of electrolytes and such of the assisting mechanical staff working in TRP and FIP sections.

**36)** **<u>LTC :</u>**

The LTC facility is provided to the employees with which they can travel upto a maximum of 4000 kms by 2$^{nd}$ class train once in every 4 years during their service.

**37)** **<u>Passes :</u>**

1) The children of the employees and the children of the deceased employees are issued with free bus passes for education purpose.
2) **<u>I.T.Passes</u>:** The employees are provided with the facility of free traveling once in a year for their family in the buses of the Corporation without any distance limit.

**38)** The drivers rendering continuous 15 years of accident free service are awarded with Gold medals and those drivers who renders continuous 5 years of accident free service are awarded with Silver medals.

**39)** The employees who renders meritorious service are given with cash awards and certificate for every year.

**40)** A well furnished community hall is constructed at Kalaburgi headquater for conducting the marriages of the employees and their children and for the other functions at concessional rates.

**41)** **Sports and Cultural activities** **:**

1) An amount of Rs. 8 lakhs is sanctioned every year towards the sports and cultural activities by the Corporation.
2) Carrom and chess are provided at all depots
3) Annual indoor and outdoor games/sports events are conducted every year and the winners are awarded.
4) Annual inter division sports tournaments are conducted every year and the winners are awarded.

**42)** **Health Checkup Camps:**

1) Free health checkup camps are conducted annually at all depots/divisions for the benefit of the employees/family members of the employees.
2) The drivers of 40 year and above age are subjected to eye (vision) chek Up every year at division level.
3) Yoga camps are held at all divisions with the assistance of trained yoga teachers for the benefit of employees.
4) Well furnished Gym facility is provided at Kalaburagi headquarters for the benefit of officers/employees of the Corporation.

# ಈಶಾನ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ

**ಕೇಂದ್ರ ಕಛೇರಿ, ಸಾರಿಗೆ ಸದನ ಮುಖ್ಯ ರಸ್ತೆ: ಕಲಬುರಗಿ**

**(ಕಾರ್ಮಿಕ ಇಲಾಖೆ)**

## ವೇತನ ಪರಿಷ್ಕರಣೆ, ಭತ್ಯೆಗಳು ಮತ್ತು ಇತರೇ ಕಾರ್ಮಿಕ ಕಲ್ಯಾಣ ಯೋಜನೆಗಳು :

1) **ವೇತನ ಪರಿಷ್ಕರಣೆ** : ಪ್ರತಿ ನಾಲ್ಕು ವರ್ಷಕ್ಕೊಮ್ಮೆ ವೇತನ ಪರಿಷ್ಕರಣೆ ಮಾಡಲಾಗುತ್ತದೆ.

2) ಶೈಕ್ಷಣಿಕ ಕ್ಷೇತ್ರದಲ್ಲಿ ಅತ್ಯುತ್ತಮ ಅಂಕಗಳನ್ನು ಪಡೆದ ಸಿಬ್ಬಂದಿ/ ಅಧಿಕಾರಿಗಳ ಮಕ್ಕಳಿಗೆ ಉತ್ತೇಜನ ನೀಡಲು ನಗದು ಬಹುಮಾನ.

| ಕ್ರ.ಸಂ. | ವಿದ್ಯಾರ್ಹತೆ | ಶೇಕಡಾವಾರು | ಮಾಧ್ಯಮ | |
|---|---|---|---|---|
| | | | ಕನ್ನಡ | ಇಂಗ್ಲೀಷ |
| 1 | ಎಸ್.ಎಸ್.ಎಲ್.ಸಿ. | 80 ರಿಂದ 90ರವರೆಗೆ | 2500/- | 2000/- |
| | ಎಸ್.ಎಸ್.ಎಲ್.ಸಿ. | 90 ಕ್ಕಿಂತ ಮೇಲ್ಪಟ್ಟು | 3000/- | 2500/- |
| 2 | ಪಿ.ಯು.ಸಿ. | 80 ರಿಂದ 90ರವರೆಗೆ | 3000/- | 2500/- |
| | ಪಿ.ಯು.ಸಿ. | 90 ಕ್ಕಿಂತ ಮೇಲ್ಪಟ್ಟು | 3500/- | 3000/- |
| 3 | ಪದವಿ: ಬಿ.ಎ./ಬಿ.ಕಾಂ/ಬಿ.ಎಸ್.ಸಿ./ ಎಂ.ಬಿ.ಬಿ.ಎಸ್./ ಬಿ.ಇ./ಬಿ.ಬಿ.ಎಮ್. | 60 ಕ್ಕಿಂತ ಮೇಲ್ಪಟ್ಟು | 4000/- | 3500/- |

3) **ವೃತ್ತಿಪರ ವ್ಯಾಸಂಗಕ್ಕೆ ಆರ್ಥಿಕ ನೆರವು** : ನೌಕರರ/ ಅಧಿಕಾರಿಗಳ ಮಕ್ಕಳು ವೃತ್ತಿಪರ ಶಿಕ್ಷಣ ಅಂದರೆ ಎಂ.ಬಿ.ಬಿ.ಎಸ್. ಬಿ.ಯು.ಎಂ.ಎಸ್., ಬಿ.ಡಿ.ಎಸ್., ಬಿ.ಎ.ಎಮ್.ಎಸ್., ಎಂ.ಡಿ., ಬಿ.ಇ., ಎಂ.ಬಿ.ಎ., ಎಂ.ಸಿ.ಎ., ಎಂ.ಟೆಕ್‌ಗಳಲ್ಲಿ ವ್ಯಾಸಂಗ ಮಾಡುವವರಿಗೆ ಗರಿಷ್ಟ ರೂ.1,00,000/- ಲಕ್ಷಗಳ ವರೆಗೆ ಹಾಗೂ ಇಂಜಿನಿಯರಿಂಗ್, ಡಿಪ್ಲೋಮಾ ಕೋರ್ಸ್‌ಗಳಲ್ಲಿ ವ್ಯಾಸಂಗ ಮಾಡುವವರಿಗೆ ರೂ.30,000/-ಗಳ ವರೆಗೆ ಶೇಕಡಾ 9.5 ಬಡ್ಡಿ ದರದಲ್ಲಿ ನೌಕರರ ವಿದ್ಯಾ ಸಹಾಯ ನಿಧಿಯಿಂದ ಸಾಲವನ್ನು ನೀಡಲಾಗುತ್ತಿದೆ. ಸದರಿ ಸಾಲದ ಹಣವನ್ನು 36 ಮಾಸಿಕ ಸಮ ಕಂತುಗಳಲ್ಲಿ ಕಡಿತ ಮಾಡಲಾಗುತ್ತದೆ.

4) **ವಿದ್ಯಾ ಸಹಾಯ ನೆರವು** : ನೌಕರರ ಮಕ್ಕಳ ವಿದ್ಯಾಭ್ಯಾಸದ ಅನುಕೂಲಕ್ಕಾಗಿ ವಿದ್ಯಾ ಸಹಾಯ ನಿಧಿಯನ್ನು ಸ್ಥಾಪಿಸಲಾಗಿದೆ. ಈ ನಿಧಿಗೆ ನೌಕರರ ವೇತನದಲ್ಲಿ ಪ್ರತಿ ತಿಂಗಳು ರೂ.10/- ಮುರಿದುಕೊಳ್ಳಲಾಗುತ್ತಿದೆ. ಆಡಳಿತ ವರ್ಗವು ತತ್ಸಮವಾದ ವಂತಿಗೆಯನ್ನು ನೀಡುತ್ತಿದೆ. ಈ ನಿಧಿಯಿಂದ ಈ ಕೆಳಕಂಡ ಕೋರ್ಸುಗಳಲ್ಲಿ ವ್ಯಾಸಂಗ ಮಾಡುತ್ತಿರುವ ನೌಕರರ ಮಕ್ಕಳಿಗೆ ವಿದ್ಯಾರ್ಥಿ ವೇತನ ನೀಡಲಾಗುತ್ತಿದೆ.

| ಕ್ರ.ಸಂ | ಕೋರ್ಸ್ | ಅವಧಿ | ವಿದ್ಯಾರ್ಥಿ ವೇತನ ಪ್ರತಿ ವರ್ಗಕ್ಕೆ |
|---|---|---|---|
| 1 | ಐ.ಟಿ.ಐ. | 1 ರಿಂದ 2 ವರ್ಷ | ರೂ.2,000/- |
| 2 | ಇಂಜಿನೀಯರ್/ ಡಿಪ್ಲೋಮಾ | 3 ವರ್ಷ | ರೂ.2,500/- |
| 3 | ಬಿ.ಇ./ಬಿ.ವಿ.ಎಸ್./ಬಿ.ಎಚ್.ಎಸ್.ಸಿ./ ಬಿ.ಎಸ್.ಸಿ.(ಅಗ್ರಿ) | - | ರೂ.4,000/- |
| 4 | ಸ್ನಾತಕ್ಕೋತ್ತರ ಪದವಿಗಳು | 2 ರಿಂದ 3 ವರ್ಷ | ರೂ.4,000/- |
| 5 | ವೈದ್ಯಕೀಯ ಪದವಿಗಳು | - | ರೂ.5,000/- |

5) **ವೈದ್ಯಕೀಯ ಸೌಲತ್ತುಗಳು** : ಸಂಸ್ಥೆಯಲ್ಲಿ Karnatak Governaments Servents (Medical Attendance) Rules 1963, ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ ನೌಕರರ ವೈದ್ಯಕೀಯ ಚಿಕತ್ಸೆ ನಿಬಂಧನೆಗಳು 1970 ಹಾಗೂ ಪ್ರಚಲಿತ ರಾಜ್ಯ ಸರ್ಕಾರಿ ಆದೇಶಗಳನ್ವಯ ನೌಕರರು ಮತ್ತು ಅವರ ಅವಲಂಬಿತರಿಗೆ ಸಂಸ್ಥೆಯು ಮಾನ್ಯತೆ ನೀಡಿದ ಆಸ್ಪತ್ರೆಗಳಲ್ಲಿ ಪಡೆದ ವೈದ್ಯಕೀಯ ಚಿಕತ್ಸಾ ವೆಚ್ಚವನ್ನು ಸಿ.ಜಿ.ಎಚ್.ಎಸ್. (CGHS) 2014ರ ನಾನ್ ಎನ್.ಎ.ಬಿ.ಎಚ್.(Non NABH) ದರ ಪಟ್ಟಿಯಂತೆ ಮರುಪಾವತಿ ಮಾಡಲಾಗುತ್ತಿದೆ.

6) **ವೈದ್ಯಕೀಯ ಮುಂಗಡ**: ನೌಕರರು ಹಾಗೂ ಅವರ ಅವಲಂಬಿತರು ತೀವ್ರತರವಾದ ಖಾಯಿಲೆಗಳಾದ ಹೃದಯ, ಮೂತ್ರಪಿಂಡ, ಕ್ಯಾನ್ಸರ್, ಸ್ಪೈನಲ್ ಕಾರ್ಡ್, ಬ್ರೇನ್ ಟ್ಯೂಮರ್‌ಗಳಿಂದ ಬಳಲುವ ಸಂದರ್ಭದಲ್ಲಿ ವೈದ್ಯರ ಶಿಫಾರಸ್ಸಿನ ಮೇರೆಗೆ ವೈದ್ಯಕೀಯ ಮುಂಗಡ ಹಣ ಪಾವತಿ ಮಾಡಲಾಗುತ್ತಿದೆ.

7) **ವೈಯಕ್ತಿಕ ಅನಾರೋಗ್ಯಕ್ಕಾಗಿ ವೈದ್ಯಕೀಯ ಮುಂಗಡ** : ವೈಯಕ್ತಿಕ ಅನಾರೋಗ್ಯ/ ಖಾಯಿಲೆಗಳಿಗೆ ಆಸ್ಪತ್ರೆಗಳಲ್ಲಿ ಒಳರೋಗಿ ಚಿಕಿತ್ಸೆ ಪಡೆಯಬೇಕಾದ ಸಂದರ್ಭಗಳಲ್ಲಿ ಖಾಸಗಿ ಆಸ್ಪತ್ರೆಗಳು ಸೇರಿದಂತೆ ಸಂಸ್ಥೆಯ ನೌಕರರು ಹಾಗೂ ಅವರ ಕುಟುಂಬದ ಸದಸ್ಯರಿಗೆ ರೂ.20,000/-ಗಳ ವರೆಗೆ ವೈದ್ಯಕೀಯ ಮುಂಗಡ ನೀಡಲಾಗುತ್ತದೆ.

8) ನೌಕರರು ಕರ್ತವ್ಯದ ಮೇಲಿದ್ದಾಗ ಅಪಘಾತದಲ್ಲಿ ಗಾಯಗೊಂಡಾಗ ಚಿಕಿತ್ಸೆಗೆ ಗರಿಷ್ಟ ಮೊತ್ತದ ವೈದ್ಯಕೀಯ ಮುಂಗಡ ನೀಡಲಾಗುತ್ತಿದೆ.

9) ಕರ್ತವ್ಯ ನಿರತ ವಲ್ಲದ ಸಂದರ್ಭಗಳಲ್ಲಿ ನೌಕರರು ಅಪಘಾತಗಳಲ್ಲಿ ತೀವ್ರತರವಾಗಿ ಗಾಯಗೊಂಡಲ್ಲಿ ಅವರಿಗೆ ಚಿಕಿತ್ಸೆಗೆ ರೂ.20,000/- ರವರೆಗೆ ವೈದ್ಯಕೀಯ ಮುಂಗಡ ನೀಡಲಾಗುತ್ತಿದೆ.

10) **ಸಂಸ್ಥೆಯ ಎಲ್ಲಾ ಘಟಕಗಳಲ್ಲಿ ಮತ್ತು ವಿಭಾಗಗಳ ಕೇಂದ್ರ ಸ್ಥಳಗಳಲ್ಲಿ ಅರೆಕಾಲಿಕ ಗೌರವ ವೈದ್ಯರುಗಳನ್ನು ನಿಯೋಜಿಸಲಾಗಿದೆ.**

11) **<u>ಖಾಸಗಿ ಆಸ್ಪತ್ರೆಗಳಿಗೆ ಮಾನ್ಯತೆ</u>** : ನೌಕರರು ಮತ್ತು ಅವರ ಅವಲಂಬಿತರಿಗೆ ಹೆಚ್ಚಿನ ವೈದ್ಯಕೀಯ ಸೌಲಭ್ಯವನ್ನು ಒದಗಿಸುವ ದೃಷ್ಟಿಯಿಂದ 159 ಖಾಸಗಿ ಆಸ್ಪತ್ರೆಗಳಿಗೆ ಹಾಗೂ 7 ಡೈಗ್ನೋಸಿಸ್ಟ್ ಸೆಂಟರ್‌ಗಳಿಗೆ ಮಾನ್ಯತೆ ನೀಡಲಾಗಿದೆ. ಇದು ಅಲ್ಲದೇ ಹೊರ ರಾಜ್ಯದ ಆಂಧ್ರ ಪ್ರದೇಶ ಹಾಗೂ ಮಹಾರಾಷ್ಟ್ರಗಳಲ್ಲಿ ತೀವ್ರತರವಾದ ಖಾಯಿಲೆಗಳಿಗೆ ಚಿಕತ್ಸೆ ಪಡೆಯಲು 15 ಖಾಸಗಿ ಆಸ್ಪತ್ರೆಗಳಿಗೆ ಮಾನ್ಯತೆ ನೀಡಲಾಗಿದೆ. ಸಂಸ್ಥೆಯ ನೌಕರರು ಮತ್ತು ಅವರ ಅವಲಂಬಿತರು ಒಳರೋಗಿ ಚಿಕಿತ್ಸೆಯನ್ನು ಪಡೆದು ನಂತರ ನಿಯಮಾನುಸಾರ ಮರುಪಾವತಿ ಪಡೆಯುವವರು.

12) **<u>ಡಿ-ಆಡಿಕ್ಷನ್ ಸೌಲಭ್ಯ</u>** : ಮಧ್ಯವ್ಯಸನಿ ನೌಕರರನ್ನು ಗುರುತಿಸಿ, ಅವರ ಆರೋಗ್ಯದ ಹಿತದೃಷ್ಟಿಯಿಂದ 1998 ರಿಂದ ಡಿ-ಆಡಿಕ್ಷನ್ ಚಿಕಿತ್ಸಾ ಸೌಲಭ್ಯವನ್ನು ಬೆಂಗಳೂರಿನ ಜಯನಗರದಲ್ಲಿರುವ ಕ.ರಾ.ರ.ಸಾ. ಸಂಸ್ಥೆಯ ಆಸ್ಪತ್ರೆಯಲ್ಲಿ ವ್ಯವಸ್ಥೆ ಮಾಡಲಾಗಿದೆ. ಚಿಕಿತ್ಸೆಗೆ ಒಳಪಡುವ ನೌಕರರಿಗೆ ತಲಾ ರೂ.8000/-ಗಳನ್ನು ಸಂಸ್ಥೆಯ ವತಿಯಿಂದ ಭರಿಸುತ್ತದೆ. ಚಿಕಿತ್ಸಾ ಅವರಧಿ 40 ದಿವಸಗಳಾಗಿರುತ್ತದೆ. ಚಿಕಿತ್ಸಾ ಅವಧಿಗೆ ನೌಕರರ ಖಾತೆಯಲ್ಲಿರುವ ವೈಯಕ್ತಿಕ ರಜೆಯನ್ನು ಮಂಜೂರು ಮಾಡಲಾಗುತ್ತದೆ. ಸಂಸ್ಥೆಯ ವತಿಯಿಂದ ಒಬ್ಬ ನೌಕರನಿಗೆ ಸೇವಾ ಅವಧಿಯಲ್ಲಿ ಒಂದು ಸಾರಿ ಮಾತ್ರ ಮಧ್ಯವ್ಯಸನಿ ಚಿಕತ್ಸೆ ನೀಡಲು ಅವಕಾಶವಿರುತ್ತದೆ.

13) **ಹುದ್ದೆ ಬದಲಾವಣೆ** : ನೌಕರರು ತಮ್ಮ ಕರ್ತವ್ಯ ನಿರ್ವಹಿಸುವಾಗ ಅಪಘಾತಕ್ಕೆ ಒಳಗಾಗಿ ಅದರ ಪರಿಣಾಮವಾಗಿ ಸದರಿ ಹುದ್ದೆಯ ಕರ್ತವ್ಯ ನಿರ್ವಹಿಸಲು ಅಶಕ್ತಗೊಂಡ ನೌಕರರಿಗೆ ಸರ್ಕಾರದ ವೈದ್ಯಕೀಯ ಮಂಡಳಿ ನೀಡುವ ವೈದ್ಯಕೀಯ ಪ್ರಮಾಣ ಪತ್ರದ ಆಧಾರದ ಮೇಲೆ ತತ್ಸಮವಾದ ಅಥವಾ ಕೆಳ ಹುದ್ದೆ ನೀಡಲಾಗುತ್ತಿದೆ.

14) **ಐ.ಓ.ಡಿ. ಸೌಲಭ್ಯ** : ನೌಕರರು ಕರ್ತವ್ಯ ನಿರ್ವಹಿಸುತ್ತಿದ್ದಾಗ ಮತ್ತು ಕರ್ತವ್ಯ ನಿರ್ವಹಣೆಯಿಂದ ಅಪಘಾತ ಸಂಭವಿಸಿ ಗಾಯಗೊಂಡು/ ಪಟ್ಟಾಗಿ ವೈದ್ಯಕೀಯ ಚಿಕಿತ್ಸೆ ಪಡೆದಲ್ಲಿ, ಸದರಿ ಅವಧಿಯನ್ನು ವೈದ್ಯಾಧಿಕಾರಿಗಳ ದೃಢೀಕರಣಕ್ಕೆ ಒಳಪಟ್ಟು ಕೆಲಸದ ಮೇಲೆ ಎಂದು (On duty) ಪರಿಗಣಿಸಲಾಗುತ್ತಿದೆ. ಈ ಸೌಲಭ್ಯವನ್ನು ತರಬೇತಿ ನೌಕರರಿಗೂ ಸಹ ವಿಸ್ತರಿಸಲಾಗಿದೆ.

15) ಅಂಗವಿಕಲ ವ್ಯಕ್ತಿಗಳ ಕಾಯ್ದೆ 1995 ರಡಿ (ಅನುಚ್ಛೇದ 2) ರಲ್ಲಿ ನಮೂದಿಸಿರುವ ಖಾಯಿಲೆಯಿಂದ ಬಳಲುತ್ತಿದ್ದು, ಕನಿಷ್ಟ ಶೇಕಡ 40 ಕ್ಕಿಂತ ಕಡಿಮೆ ಇರದ ಪ್ರಮಾಣದ ಅಂಗವಿಕಲತೆಯನ್ನು ಹೊಂದಿರುವ ಪ್ರಕರಣಗಳಲ್ಲಿ ತತ್ಸಂಬಂಧ ಸರ್ಕಾರವು ರಚಿಸಿರುವ ವೈದ್ಯಕೀಯ ಮಂಡಳಿಯವರು ನೀಡುವ ವೈದ್ಯಕೀಯ ಪ್ರಮಾಣ ಪತ್ರಗಳ ಆಧಾರದ ಮೇಲೆ ನೌಕರರನ್ನು ಪರ್ಯಾಯ ಹುದ್ದೆಯಲ್ಲಿ ನಿಯೋಜಿಸಲಾಗುತ್ತಿದೆ.

16) **ದೈಹಿಕವಾಗಿ ಅಸಮರ್ಥರಾದ ನೌಕರರಿಗೆ ರೂ.6.00 ಲಕ್ಷಗಳವರೆಗಿನ ಗರಿಷ್ಟ ಮೊತ್ತದ ಹೆಚ್ಚುವರಿ ಆರ್ಥಿಕ ಸೌಲಭ್ಯದ ಸ್ವಯಂ ನಿವೃತ್ತಿ ಯೋಜನೆಯು ಜಾರಿಯಲ್ಲಿರುತ್ತದೆ.**

17) **ನೌಕರರ ಕುಟುಂಬ ಕಲ್ಯಾಣ ಯೋಜನೆ** (ಆಂತರಿಕ ಗುಂಪು ವಿಮಾ ಯೋಜನೆ) : **ನೌಕರರ ಕುಟುಂಬ ಕಲ್ಯಾಣ ಯೋಜನೆ (ಆಂತರಿಕ ಗುಂಪು ಜೀವ ವಿಮಾ ಯೋಜನೆ)ಯನ್ನು ಸೆಪ್ಟೆಂಬರ್ 2011 ರಿಂದ ಜಾರಿಗೊಳಿಸಲಾಗಿದೆ. ಸದರಿ ಯೋಜನೆಯ ಸದಸ್ಯತ್ವ ಹೊಂದಿದ ನೌಕರರು/ ಅಧಿಕಾರಿ ಮರಣ ಹೊಂದಿದ್ದಲ್ಲಿ ಅವರ ವಾರಸುದಾರರಿಗೆ ರೂ. 3 ಲಕ್ಷಗಳ ಪರಿಹಾರವನ್ನು ನೀಡಲಾಗುತ್ತಿದೆ. ಸದರಿ ನಿಧಿಗೆ ಪ್ರತಿ ನೌಕರ/ಅಧಿಕಾರಿಯ ವೇತನದಿಂದ ಮಾಸಿಕ ರೂ.100/-ಗಳನ್ನು ಕಡಿತಗೊಳಿಸಲಾಗುತ್ತಿದೆ. ಮತ್ತು ಸಂಸ್ಥೆಯ ವತಿಯಿಂದ ಪ್ರತಿ ನೌಕರ/ ಅಧಿಕಾರಿಯ ಪರವಾಗಿ ತಲಾ ರೂ.50/-ಗಳನ್ನು ನೀಡಲಾಗುತ್ತಿದೆ.**

18) **ಮನೆ ಕಟ್ಟಲು ಮುಂಗಡ :** ನೌಕರರು/ ಅಧಿಕಾರಿಗಳು ಮನೆ ಕಟ್ಟಲು/ ಮನೆ ಖರೀದಿಸಲು ಸಾಲವನ್ನು ಯಾವುದೇ ರಾಷ್ಟ್ರೀಕೃತ ಬ್ಯಾಂಕ ಅಥವಾ ಅಧಿಕೃತ ಹಣಕಾಸು ಸಂಸ್ಥೆಯಗಳಿಂದ ಪಡೆದಿದ್ದಲ್ಲಿ ನೌಕರನು ಪಡೆದ ಸಾಲದಲ್ಲಿ ರೂ. 5 ಲಕ್ಷಗಳಿಗೆ ಶೇಕಡಾ 4 ರಷ್ಟು ಬಡ್ಡಿ ಸಹಾಯ ಧನ ಗೃಹ ಸಾಲದ ಮೇಲೆ ನೀಡುವ ಬಡ್ಡಿ ಸಹಾಯ ಧನದ ಗರಿಷ್ಠ ಮೊತ್ತವನ್ನು ರೂ.1 ಲಕ್ಷದ ವರೆಗೆ ಸೀಮಿತಗೊಳಿಸಿ ನೀಡಲಾಗುತ್ತಿದೆ.

19) **ಅನುಕಂಪದ ಆಧಾರದ ಮೇಲೆ ನೇಮಕಾತಿ** : ಸೇವೆಯಲ್ಲಿದ್ದಾಗ ಮೃತ ಪಟ್ಟ ನೌಕರನ ಅವಲಂಬಿತರಿಗೆ ಹುದ್ದೆಯ ಲಭ್ಯತೆ ಹಾಗೂ ಪದವೃಂದ ಮತ್ತು ನೇಮಕಾತಿ ನಿಯಮಾವಳಿಗಳ ಪ್ರಕಾರ ವಯಸ್ಸು, ನಿಗದಿತ ವಿದ್ಯಾರ್ಹತೆ ಪೂರೈಸುವ ನಿಬಂಧನೆಗಳಿಗೆ ಒಳಪಟ್ಟು ಅನುಕಂಪದ ಆಧಾರದ ಮೇಲೆ ಸಂಸ್ಥೆಯಲ್ಲಿ ನೌಕರಿ ನೀಡಲಾಗುತ್ತಿದೆ.

20) **ರಜೆ** : ಸಂಸ್ಥೆಯಲ್ಲಿ ನೌಕರನು ಈ ಕೆಳಕಂಡಂತೆ ರಜೆಗೆ ಅರ್ಹರಿರುತ್ತಾರೆ.

4) **ಸಾಂದರ್ಭಿಕ ರಜೆ** : **ಒಂದು ವರ್ಷದಲ್ಲಿ 15 ದಿನಗಳು.**
5) **ಗಳಿಕೆ ರಜೆ** : **11 ದಿನಗಳ ಕೆಲಸಕ್ಕೆ ಒಂದು ದಿನ.**
6) **ವೈದ್ಯಕೀಯ ರಜೆ** : **ಪೂರ್ಣಗೊಂಡ ಪ್ರತಿ ವರ್ಷಕ್ಕೆ 20 ದಿನಗಳ ಅರ್ಧ ಸಂಬಳ ರಜೆ.**

21) **ರಜೆ ನಗದೀಕರಣ (ಗಳಿಕೆ ರಜೆ)** : ಆರ್ಥಿಕ ವರ್ಷ ಏಪ್ರಿಲ್-1 ರಿಂದ ಮಾರ್ಚ-31ರ ವರೆಗೆ 15 ದಿನಗಳವರೆಗೆ ಮೀರಿದ ಗಳಿಕೆ ರಜೆಯನ್ನು ಆದ್ಯರ್ಪಿಸಿ ರಜಾ ವೇತನಕ್ಕೆ ಸಮನಾದ ನಗದೀಕರಣ ಪಡೆಯುವ ಸೌಲಭ್ಯ ಜಾರಿಯಲ್ಲಿರುತ್ತದೆ.

22) ರಾಜ್ಯ ಸರ್ಕಾರದ ಮಾದರಿಯಲ್ಲಿ ಸಂಸ್ಥೆಯ ನೌಕರರ ಗಳಿಕೆ ರಜೆಯ ಕ್ರೆಡಿಟ್ ಮಿತಿಯನ್ನು 300 ದಿನಗಳ ವರೆಗೆ ಹೆಚ್ಚಿಸಲಾಗಿದೆ.

23) ರಾಜ್ಯ ಸರ್ಕಾರದ ಮಾದರಿಯಲ್ಲಿ 180 ದಿವಸಗಳ ಹೆರಿಗೆ ರಜೆಯನ್ನು ಮಹಿಳಾ ನೌಕರರಿಗೆ ಮಂಜೂರು ಮಾಡಲಾಗುತ್ತಿದೆ.

24) ಅಂಧ ಮತ್ತು ಅಂಗವಿಕಲ ನೌಕರರಿಗೆ ವಾಹನ ಭತ್ಯೆಯ ದರವನ್ನು ರಾಜ್ಯ ಸರ್ಕಾರದ ಮಾದರಿಯಲ್ಲಿ ಅವರ ಮೂಲ ವೇತನದ ಶೇಕಡಾ 6 ರಷ್ಟು ಮಂಜೂರು ಮಾಡಲಾಗುತ್ತಿದೆ.

25) ಸಂಸ್ಥೆಯ ಎಲ್ಲಾ ಘಟಕಗಳಲ್ಲಿ ಪುರುಷ ಮತ್ತು ಮಹಿಳಾ ಸಿಬ್ಬಂದಿಗಳಿಗೆ ಪ್ರತ್ಯೇಕವಾದ ಎಲ್ಲಾ ಮೂಲಭೂತ ಸೌಲಭ್ಯಗಳುಳ್ಳ ಸುಸಜ್ಜಿತ ವಿಶ್ರಾಂತಿ ಗೃಹಗಳನ್ನು ಹಾಗೂ ಶೌಚಾಲಯಗಳನ್ನು ಒದಗಿಸಲಾಗಿದೆ.

26) ನೌಕರನು ಮರಣ ಹೊಂದಿದ ಸಂದರ್ಭದಲ್ಲಿ ಶವ ಸಂಸ್ಕಾರಕ್ಕಾಗಿ ಅವರ ಅವಲಂಬಿತರಿಗೆ ರೂ.5000/-ಗಳನ್ನು ಡಿ.ಆರ್.ಬಿ.ಎಫ್. ಫಂಡನಿಂದ ಹಾಗೂ ರೂ.10,000/-ಗಳನ್ನು ಹೆಚ್ಚುವರಿಯಾಗಿ ಸಂಸ್ಥೆಯಿಂದ ಎಕ್ಸ್‌ಗ್ರೇಷಿಯಾ ರೂಪದಲ್ಲಿ ನೀಡಲಾಗುತ್ತಿದೆ.

27) ನೌಕರರ ಅವಲಂಬಿತ ಅಂಧ ಅಥವಾ ಚಲನ ವೈಕಲ್ಯತೆ ಹೊಂದಿರುವ ಮಕ್ಕಳ ಶಿಕ್ಷಣಕ್ಕಾಗಿ ಒಂದು ಮಗುವಿಗೆ ತಲಾ ರೂ.500/-ಗಳಂತೆ ಶಿಕ್ಷಣ ಭತ್ಯೆಯನ್ನು ಮತ್ತು ಅಂಗವಿಕಲತೆ ಹೊಂದಿರುವ ನೌಕರರ ಮಕ್ಕಳ ಪಾಲನೆ/ ಪೋಷಣೆ ಮಾಡುವುದಕ್ಕಾಗಿ ಮಾಸಿಕ ರೂ.500/-ಗಳ ದರದಲ್ಲಿ ಪೋಷಣಾ ಭತ್ಯೆಯನ್ನು ಸಂಸ್ಥೆಯ ನೌಕರರಿಗೆ ನೀಡಲಾಗುತ್ತಿದೆ.

28) ಬುದ್ಧಿಮಾಂದ್ಯ / ಅಂಗವಿಕಲ ಮಕ್ಕಳನ್ನು ನೋಡಿಕೊಳ್ಳಲು ಮಹಿಳಾ ನೌಕರರಿಗೆ ಒಟ್ಟು 730 ದಿವಸಗಳ "ಶಿಶು ಪಾಲನಾ ರಜೆ" ಯನ್ನು ವೇತನ ಸಹಿತವಾಗಿ ಮಂಜೂರು ಮಾಡಲಾಗುತ್ತಿದೆ.

29) ಬೋನಸ್ ಕಾಯಿದೆಗೆ ಕೇಂದ್ರ ಸರ್ಕಾರವು ಇತ್ತೀಚೆಗೆ ತಂದಿರುವ ತಿದ್ದುಪಡಿಯನ್ವಯ ಪರಿಷ್ಕೃತ ದರದಲ್ಲಿ ಅಂದರೆ ರೂ.21,000/-ಗಳ ವರೆಗಿನ ವೇತನ ಪಡೆಯುತ್ತಿರುವ ಎಲ್ಲಾ ನೌಕರರಿಗೆ ಗರಿಷ್ಟ ರೂ.7,000/-ಗಳ ಬೋನಸ್‌ನ್ನು ನೀಡಲಾಗುತ್ತಿದೆ.

30) ಮಹಿಳಾ ಸಿಬ್ಬಂದಿಗಳಿಗೆ ಮಗುವಿಗೆ 2 ವರ್ಷ ತುಂಬುವವರೆಗೆ ಶಿಶುಪಾಲನಾ ಭತ್ಯೆ ರೂ.750/-ಗಳನ್ನು ನೀಡಲಾಗುತ್ತಿದೆ.

31) ತರಬೇತಿ ನೌಕರರಿಗೆ(ತರಬೇತಿ ನೌಕರರಿಗೆ ಸೀಮಿತಗೊಳಿಸಿ) ವೈದ್ಯಕೀಯ ಮರುಪಾವತಿ ಸೌಲಭ್ಯವನ್ನು ವಿಸ್ತರಿಸಲಾಗಿದೆ

32) ಕನ್ನಡಕ ಖರೀದಿಯ ಮರುಪಾವತಿಯನ್ನು ಸಿಬ್ಬಂದಿಗಳಿಗೆ ಮಾತ್ರ ರೂ.1,000/-ಗಳ ವರೆಗೆ ನೀಡಲಾಗುತ್ತಿದೆ.

33) ಹಬ್ಬದ ಮುಂಗಡ ರೂ.5000/-ಗಳ ವರೆಗೆ ನೀಡಲಾಗುತ್ತಿದ್ದು ಅದನ್ನು 10 ಸಮ ಕಂತುಗಳಲ್ಲಿ ಸಂಬಳದಲ್ಲಿ ಕಡಿತಗೊಳಿಸಲಾಗುತ್ತಿದೆ.

34) ಮಾರಣಾಂತಿಕ ಮತ್ತು ಮಾರಣಾಂತಿಕವಲ್ಲದ ಅಪಘಾತ ಪ್ರಕರಣಗಳಲ್ಲಿ ಭಾಗಿಯಾದ ಚಾಲಕರಿಗೆ ಕಾನೂನು ಸಹಾಯ ಧನ ಅನುಕ್ರಮವಾಗಿ ರೂ.5000/- ಹಾಗೂ 2500/- ನೀಡಲಾಗುತ್ತಿದೆ.

35) **ಉಚಿತ ಹಾಲು** : ಸ್ಪ್ರೇ ಪೆಂಟರ್‌ಗಳು, ಬೆಸುಗೆಗಾರರು, ಟಿನ್‌ಸ್ಮಿತ್‌ಗಳು, ಎಲೆಕ್ಟ್ರೋಲೈಟ್‌ಗಳ ತಯಾರಿಕೆಯಲ್ಲಿ ತೆಗೆದುಕೊಂಡಿರುವ ಎಲೆಕ್ಟ್ರಿಷೀಯನ್‌ಗಳು ಮತ್ತು ಈ ವರ್ಗದ ನೌಕರರಿಗೆ ನೇರವಾಗಿ ಸಹಾಯಕರಾಗಿರುವ ಅಸಿಸ್ಟಂಟ್‌ಗಳು ಅಥವಾ ಹೆಲ್ಪರ್‌ಗಳು ಮತ್ತು ಟಿ.ಆರ್.ಪಿ. ಹಾಗೂ ಎಫ್.ಐ.ಪಿ. ಶಾಖೆಗಳಲ್ಲಿ ಕೆಲಸ ಮಾಡುವ ಎಲ್ಲಾ ನೌಕರರು ಅವರು ಕೆಲಸದ ಮೇಲಿದ್ದಾಗ 1/4 ಲೀಟರ್ ಉಚಿತ ಹಾಲು ನೀಡಲಾಗುತ್ತಿದೆ.

36) **ಎಲ್.ಟಿ.ಸಿ.** ನೌಕರರು ಸೇರಿದಂತೆ ಕುಟುಂಬದ 6 ಸದಸ್ಯರು 4 ವರ್ಷಕ್ಕೊಮ್ಮೆ 4000 ಕಿ.ಮೀ. ರವರೆಗೆ 2ನೇ ದರ್ಜೆ ರೈಲಿನಲ್ಲಿ ಹೋಗಿ ಬರಲು ಎಲ್.ಟಿ.ಸಿ. ಸೌಲಭ್ಯವನ್ನು ವಿಸ್ತರಿಸಲಾಗಿದೆ.

37) **ಪಾಸುಗಳು** :

1) ನೌಕರರ ಮಕ್ಕಳಿಗೆ/ ಸೇವೆಯಲ್ಲಿದ್ದಾಗ ಮೃತ ಪಟ್ಟ ನೌಕರರ ಮಕ್ಕಳಿಗೆ ಉಚಿತ ವಿದ್ಯಾರ್ಥಿ ಪಾಸುಗಳನ್ನು ನೀಡಲಾಗುತ್ತಿದೆ.
2) **ಐ.ಟಿ. ಪಾಸುಗಳು** : ವರ್ಷದಲ್ಲಿ ಒಮ್ಮೆ ನೌಕರ ಮತ್ತು ಆತನ ಕುಟುಂಬಕ್ಕೆ ಕುಟುಂಬದ ಸದಸ್ಯರ ಸಂಖ್ಯೆಗೆ ನಿರ್ಬಂಧ ವಿಲ್ಲದೇ ನಿಗಮದ ಬಸ್ಸುಗಳು ಸಂಚರಿಸುವ ಯಾವುದೇ ಸ್ಥಳಕ್ಕೆ ಹೋಗಿ ಬರಲು ಉಚಿತ ಪಾಸ್‌ಗಳನ್ನು ನೀಡಲಾಗುತ್ತಿದೆ.

38) ಸತತ 15 ವರ್ಷಗಳ ಅಪಘಾತ ರಹಿತ ಸೇವೆ ಸಲ್ಲಿಸಿದ ಚಾಲಕರಿಗೆ ಚಿನ್ನದ ಪದಕ ಮತ್ತು ಸತತ 5 ವರ್ಷ ಅಪಘಾತ ರಹಿತ ಸೇವೆ ಸಲ್ಲಿಸಿದ ಚಾಲಕರಿಗೆ ಬೆಳ್ಳಿ ಪದಕಗಳನ್ನು ನೀಡಲಾಗುತ್ತಿದೆ.

39) ಶ್ಲಾಘನೀಯ ಸೇವೆ ಸಲ್ಲಿಸಿದ ನೌಕರರುಗಳನ್ನು ಗುರುತಿಸಿ ನಗದು ಬಹುಮಾನ ಮತ್ತು ಪ್ರಶಸ್ತಿ ಪತ್ರಗಳನ್ನು ನೀಡಲಾಗುತ್ತಿದೆ.

40) ನೌಕರರುಗಳಿಗೆ ಸ್ವಂತಕ್ಕೆ ಹಾಗೂ ಅವರ ಮಕ್ಕಳ ಮದುವೆ ಕಾರ್ಯಕ್ರಮಗಳನ್ನು ನಡೆಸಲು ಕಲಬುರಗಿಯಲ್ಲಿ ಸುಸಜ್ಜಿತವಾದ ಸಮುದಾಯ ಭವನವನ್ನು ನಿರ್ಮಿಸಲಾಗಿದೆ. ಅದನ್ನು ನೌಕರರುಗಳಿಗೆ ರಿಯಾಯಿತಿ ದರದಲ್ಲಿ ನೀಡಲಾಗುತ್ತಿದೆ.

41) **ಕ್ರೀಡಾ ಮತ್ತು ಸಾಂಸ್ಕೃತಿಕ ಚಟುವಟಿಕೆಗಳು** :

1) ಸಂಸ್ಥೆಯ ಕ್ರೀಡಾ ಮತ್ತು ಸಾಂಸ್ಕೃತಿಕ ನಿಧಿಗೆ ಸಂಸ್ಥೆಯ ವತಿಯಿಂದ ವಾರ್ಷಿಕ ರೂ.8 ಲಕ್ಷಗಳನ್ನು ಮಂಜೂರು ಮಾಡಗಲಾಗುತ್ತಿದೆ.
2) ಎಲ್ಲಾ ವಿಭಾಗಗಳ ಘಟಕಗಳಲ್ಲಿ ಕೆರಂ. ಚೆಸ್‌ಗಳನ್ನು ಒದಗಿಸಲಾಗಿದೆ.
3) ಪ್ರತಿ ವರ್ಷ ನೌಕರರಿಗೆ ಒಳಾಂಗಣ ಹಾಗೂ ಹೊರಾಂಗಣ ಕ್ರೀಡೆಗಳನ್ನು ಏರ್ಪಡಿಸಿ ವಿಜೇತರಾದವರಿಗೆ ಪಾರಿತೋಷಗಳನ್ನು ನೀಡಲಾಗುತ್ತಿದೆ.
4) ಪ್ರತಿ ವರ್ಷ ಅಂತರ ವಿಭಾಗೀಯ ಕ್ರೀಡೆಗಳನ್ನು ಏರ್ಪಡಿಸಿ ವಿಜೇತರಿಗೆ ಪಾರಿತೋಷಕಗಳನ್ನು ನೀಡಲಾಗುತ್ತಿದೆ.

42) **ಆರೋಗ್ಯ ಶಿಬಿರಗಳು** :

1) ಪ್ರತಿ ವರ್ಷ ಎಲ್ಲಾ ಘಟಕಗಳಲ್ಲಿ / ವಿಭಾಗಗಳಲ್ಲಿ ಉಚಿತ ಆರೋಗ್ಯ ತಪಾಸಣಾ ಶಿಬಿರಗಳನ್ನು ಏರ್ಪಡಿಸಿ ಸಂಸ್ಥೆಯ ನೌಕರರುಗಳ ಹಾಗೂ ಅವರ ಅವಲಂಬಿತರುಗಳ ಆರೋಗ್ಯ ತಪಾಸಣೆ ಮಾಡಿಸಲಾಗುತ್ತಿದೆ.
2) 40 ವರ್ಷ ವಯೋಮಿತಿ ಮೀರಿದ ಚಾಲಕರುಗಳ ಕಣ್ಣು ತಪಾಸಣೆಯನ್ನು ಕಡ್ಡಾಯವಾಗಿ ಮಾಡಿಸಲಾಗುತ್ತಿದೆ.
3) ಎಲ್ಲಾ ವಿಭಾಗಗಳಲ್ಲಿ ತರಬೇತಿ ಪಡೆದ ಯೋಗ ಶಿಕ್ಷಕರಿಂದ ಸಿಬ್ಬಂದಿಗಳಿಗಾಗಿ ಯೋಗ ತರಬೇತಿ ಶಿಬಿರಗಳನ್ನು ಆಯೋಜಿಸಲಾಗುತ್ತಿದೆ.
4) ಕಲಬುರಗಿ ಕೇಂದ್ರ ಸ್ಥಾನದಲ್ಲಿ ಅಧಿಕಾರಿ ಮತ್ತು ನೌಕರರ ಉತ್ತಮ ಆರೋಗ್ಯವನ್ನು ಕಾಪಾಡುವ ನಿಟ್ಟಿನಲ್ಲಿ ಸುಸಜ್ಜಿತವಾದ ವ್ಯಾಯಾಮ ಶಾಲೆ(Gym)ಯನ್ನು ಪ್ರಾರಂಭಿಸಲಾಗಿದೆ.

**ಮುಖ್ಯ ಕಾರ್ಮಿಕ ಮತ್ತು ಕಲ್ಯಾಣಾಧಿಕಾರಿ,**
**ಈ.ಕ.ರ.ಸಾ.ಸಂಸ್ಥೆ ಕೇಂದ್ರ ಕಛೇರಿ ಕಲಬುರಗಿ**